ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 1011/2025

ಪ್ರಾಸಾ – 10

ಚಾಸಾ – 10

**ಸಾಕ್ಷಿಯು ದಿಃ 28.04.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ವಿಜಯಲಕ್ಷ್ಮೀ ಮೇಟಿ |
| ಗಂಡನ ಹೆಸರು | : | ಪ್ರಕಾಶ್ ಗೌಡ |
| ವಯಸ್ಸು | : | 31 ವರ್ಷ |
| ವೃತ್ತಿ | : | ಡಬ್ಲ್ಯೂಪಿಸಿ |
| ವಾಸಸ್ಥಳ | : | ಹರಪ್ಪನಹಳ್ಳಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ ವಿಸಿ ಮೂಲಕ**

(ಸಾಕ್ಷಿಯು ನೀಡಿದ ವಿವರಣೆಯಂತೆ ಪಾಪಲಿಂಗಪ್ಪ ಹೆಚ್.ಸಿ 254, ಚಿಗಟೇರಿ ಪೊಲೀಸ್ ಠಾಣೆಯವರು ಕೋ ಆರ್ಡಿನೇಟರ್ ಆಗಿರುತ್ತಾರೆ. ಈ ನ್ಯಾಯಾಲಯದಲ್ಲಿ ಶ್ರೀ ಮಹದೇವಸ್ವಾಮಿ ವಿಸಿ ಗೆ ಕೋ ಆರ್ಡಿನೇಟರ್ ಆಗಿರುತ್ತಾರೆ.)

ದಿಃ 2017 ರಿಂದ 2023 ರವರೆಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಮಪಿಸಿ ಕರ್ತವ್ಯ ನಿರ್ವಹಿಸಿರುತ್ತೇನೆ.

02. ನಾನು ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಗಣಕಯಂತ್ರ ನಿರ್ವಹಣೆ ಕರ್ತವ್ಯ ಮಾಡುತ್ತಿದೆನು. ದಿನಾಂಕ 18.06.2022 ರಂದು ನಮ್ಮ ಠಾಣೆಗೆ ಇಮೇಲ್ ಮೂಲಕ ಏರ್ಟೆಲ್ ಸರ್ವಿಸ್ ಪ್ರೊವೈಡರ್ ರವರಿಂದ ಸಂದೇಶ ಬಂದಿದ್ದು ಅದನ್ನು ನೋಡಲಾಗಿ ಈ ಪ್ರಕರಣದ ದಾಖಲಾತಿಯಾಗಿದ್ದು, ಸದರಿ ಇಮೇಲ್ ನ್ನು ಡೌನ್ ಲೋಡ್

ಮಾಡಿ ದಾಖಲೆಗಳನ್ನು ಪ್ರಿಂಟ್ ತೆಗೆದು ಚಾಸಾ 12 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷಿಯು ನಿಪಿ 10 ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :– ಆರೋಪಿ ಪರ ವಕೀಲರಿಂದ**

ನಿಪಿ 10 ದಾಖಲೆಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಸುಳ್ಳು ದಾಖಲೆಯನ್ನು ಸಿದ್ಧಪಡಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ **https://meet.google.com/nqh-qhmn-gnb** ವಿಸಿ ಮೂಲಕ ನಡೆದ ವಿಚಾರಣೆಯನ್ನು ಸಮಯ 4.00 ರಿಂದ 4.25 ರವರೆಗೆ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಾಕ್ಷಿದಾರರ ಸಹಿ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ

ಕೋ ಆರ್ಡಿನೇಟರ್ ಸಹಿ

1.

2.